**All India Radio: Bangalore**
**National Bulletin In Kannada**
**01.11.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**01.11.2025 1.10 p.m.**

**<><><><>**

ಮುಖ್ಯಾಂಶಗಳು

1. ದಿಲ್ ಕಿ ಬಾತ್; ಹೃದ್ರೋಗ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳೊಂದಿಗೆ ಪ್ರಧಾನಿ ನರೇಂದ್ರ ಮೋದಿ ಸಂವಾದ
2. ಜಾಗತಿಕ ದಕ್ಷಿಣ ರಾಷ್ಟ್ರಗಳ ನಡುವೆ ಕಾರ್ಯತಂತ್ರದ ಸಹಯೋಗಕ್ಕೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಕರೆ
3. ಪ್ರಾದೇಶಿಕ ಶಾಂತಿ, ಸ್ಥಿರತೆಗೆ ಆಸಿಯಾನ್ ದೇಶಗಳ ನಡುವೆ ಸಹಕಾರ ಅಗತ್ಯ - ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರತಿಪಾದನೆ
4. ಇಸ್ರೋದಿಂದ ನಾಳೆ ದೇಶದ ಅತ್ಯಂತ ಭಾರವಾದ ಸಂವಹನ ಉಪಗ್ರಹ ಸಿಎಂಎಸ್-೦೩ ಉಡಾವಣೆ

<><><><>

ರಾಜ್ಯ ರಚನೆಯ ೨೫ ವರ್ಷಗಳನ್ನು ಆಚರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರಧಾನಿ ನರೇಂದ್ರ ಮೋದಿ ಇಂದು ಛತ್ತೀಸ್‌ಗಢಕ್ಕೆ ಭೇಟಿ ನೀಡಿದ್ದಾರೆ. 'ದಿಲ್ ಕಿ ಬಾತ್' ಉಪಕ್ರಮದ ಭಾಗವಾಗಿ ನವ ರಾಯ್‌ಪುರ ಅಟಲ್ ನಗರದ ಶ್ರೀ ಸತ್ಯ ಸಾಯಿ ಸಂಜೀವನಿ ಆಸ್ಪತ್ರೆಯಲ್ಲಿ 'ಗಿಫ್ಟ್ ಆಫ್ ಲೈಫ್' ಕಾರ್ಯಕ್ರಮದಡಿಯಲ್ಲಿ ಹೃದಯ ಕಾಯಿಲೆಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ಪಡೆಯುತ್ತಿರುವ ಸುಮಾರು ೨ ಸಾವಿರದ ೫೦೦ ಮಕ್ಕಳೊಂದಿಗೆ ಪ್ರಧಾನಿ ಮೋದಿ ಸಂವಾದ ನಡೆಸಿದರು. ಇದೇ ವೇಳೆ ಅವರು ನವ ರಾಯ್‌ಪುರ ಅಟಲ್ ನಗರದ ಛತ್ತೀಸ್‌ಗಢ ವಿಧಾನಸಭೆಯ ನೂತನ ಕಟ್ಟಡದಲ್ಲಿ ಭಾರತ ರತ್ನ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಪ್ರತಿಮೆಯನ್ನು ಮೋದಿ ಅನಾವರಣಗೊಳಿಸಲಿದ್ದಾರೆ. ಬಳಿಕ ಅವರು, ರಾಜ್ಯ ರಚನೆಯ ೨೫ ವರ್ಷಗಳನ್ನು ಆಚರಿಸುವ ಛತ್ತೀಸ್‌ಗಢ ರಜತ್ ಮಹೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಅಲ್ಲಿ ಅವರು ರಸ್ತೆಗಳು, ಕೈಗಾರಿಕೆ, ಆರೋಗ್ಯ ರಕ್ಷಣೆ ಮತ್ತು ಇಂಧನ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ

೧೪ ಸಾವಿರದ ೨೬೦ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ, ಶಿಲಾನ್ಯಾಸ ಮಾಡಲಿದ್ದಾರೆ. ಗ್ರಾಮೀಣ ಜೀವನೋಪಾಯವನ್ನು ಬಲಪಡಿಸುವ ಭಾಗವಾಗಿ, ಪ್ರಧಾನಿಯವರು ಒಂಬತ್ತು ಜಿಲ್ಲೆಗಳಲ್ಲಿ ೧೨ ಹೊಸ ಸ್ಟಾರ್ಟ್-ಅಪ್ ಗ್ರಾಮ ಉದ್ಯಮಶೀಲತಾ ಬ್ಲಾಕ್‌ಗಳನ್ನು ಉದ್ಘಾಟಿಸಲಿದ್ದಾರೆ. ಅವರು ೩.೫೧ ಲಕ್ಷ ಮನೆಗಳ ಗೃಹ ಪ್ರವೇಶದಲ್ಲಿ ಭಾಗವಹಿಸಲಿದ್ದಾರೆ ಮತ್ತು ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ಮೂರು ಲಕ್ಷ ಫಲಾನುಭವಿಗಳಿಗೆ ೧ ಸಾವಿರದ ೨೦೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಿದ್ದಾರೆ. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು, ಪಾತಲ್‌ಗಾಂವ್-ಕುಂಕುರಿಯಿಂದ ಛತ್ತೀಸ್‌ಗಢ-ಜಾರ್ಖಂಡ್ ಗಡಿಯವರೆಗೆ ನಾಲ್ಕು ಪಥಗಳ ಗ್ರೀನ್‌ಫೀಲ್ಡ್ ಹೆದ್ದಾರಿಗೆ ಅಡಿಪಾಯ ಹಾಕಲಿದ್ದಾರೆ. ಇದನ್ನು ಭಾರತ್‌ಮಾಲಾ ಪರಿಯೋಜನಾ ಅಡಿಯಲ್ಲಿ ೩ ಸಾವಿರದ ೧೫೦ ಕೋಟಿ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

<><><>

ಜಾಗತಿಕ ದಕ್ಷಿಣ ರಾಷ್ಟ್ರಗಳ ನಡುವೆ ಕಾರ್ಯತಂತ್ರದ ಸಹಯೋಗಕ್ಕೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಕರೆ ನೀಡಿದ್ದಾರೆ. ನವದೆಹಲಿಯ ಉಪರಾಷ್ಟ್ರಪತಿಗಳ ನಿವಾಸದಲ್ಲಿ ಅಂತಾರಾಷ್ಟ್ರೀಯ ಕಾರ್ಯತಂತ್ರ ಸಹಯೋಗ ಕಾರ್ಯಕ್ರಮದ ೩ನೇ ಆವೃತ್ತಿ ಉದ್ದೇಶಿಸಿ ಮಾತನಾಡಿದ ಅವರು, ನೈತಿಕ ನಾಯಕತ್ವ, ಜವಾಬ್ದಾರಿಯುತ ತಂತ್ರಜ್ಞಾನ ಬಳಕೆ ಮತ್ತು ಜಾಗತಿಕ ಏಕತೆಯ ಅಗತ್ಯವನ್ನು ಅವರು ಪ್ರತಿಪಾದಿಸಿದರು. ಅಂತಾರಾಷ್ಟ್ರೀಯ ಕಾರ್ಯತಂತ್ರ ಸಹಯೋಗ ಕಾರ್ಯಕ್ರಮವು ಜಾಗತಿಕ ದಕ್ಷಿಣ ದೇಶಗಳನ್ನು ತೊಡಗಿಸಿಕೊಳ್ಳಲು, ಜಾಗತಿಕವಾಗಿ ಯೋಚಿಸಲು ಮತ್ತು ಉತ್ತಮ ನಾಳೆಗಾಗಿ ಒಟ್ಟಾಗಿ ಕಾರ್ಯ ನಿರ್ವಹಿಸಲು ಒಟ್ಟುಗೂಡಿಸುತ್ತದೆ ಎಂದು ಅವರು ಹೇಳಿದರು. ಹವಾಮಾನ ಬದಲಾವಣೆ, ಕೃತಕ ಬುದ್ಧಿಮತ್ತೆ, ಸಾರ್ವಜನಿಕ ಆರೋಗ್ಯ ಮತ್ತು ಆರ್ಥಿಕ ಅಭಿವೃದ್ಧಿಯಂತಹ ವಿಷಯಗಳಿಗೆ ಸಾಮೂಹಿಕ, ಸಹಾನುಭೂತಿ ಮತ್ತು ಕಾರ್ಯತಂತ್ರದ ಸಹಯೋಗದ ಅಗತ್ಯವಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಪ್ರತಿಪಾದಿಸಿದರು.

<><><>

ಆಸಿಯಾನ್ ದೇಶಗಳೊಂದಿಗಿನ ರಕ್ಷಣಾ ಸಹಕಾರವನ್ನು ಭಾರತ, ಪ್ರಾದೇಶಿಕ ಶಾಂತಿ, ಸ್ಥಿರತೆ ಮತ್ತು ಸಾಮರ್ಥ್ಯವರ್ಧನೆಗೆ ಕೊಡುಗೆಯಾಗಿ ನೋಡುತ್ತದೆ ಎಂದು ರಕ್ಷಣಾ ಸಚಿವ ರಾಜನಾಥ್

ಸಿಂಗ್ ಹೇಳಿದ್ದಾರೆ.  ಮಲೇಷ್ಯಾದ ಕೌಲಾಲಂಪುರದಲ್ಲಿ ನಡೆದ ೧೨ನೇ ಆಸಿಯಾನ್ ರಕ್ಷಣಾ ಸಚಿವರ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಆಸಿಯಾನ್ ರಕ್ಷಣಾ ಸಚಿವರ ಸಭೆಯು ಭಾರತದ 'ಆಕ್ಟ್ ಈಸ್ಟ್ ಪಾಲಿಸಿ' ಮತ್ತು ಭಾರತದ ಇಂಡೋ - ಪೆಸಿಫಿಕ್ ದೃಷ್ಟಿಕೋನದ ಅವಿಭಾಜ್ಯ ಅಂಗವಾಗಿದೆ ಎಂದರು. ಭಾರತದ ಇಂಡೋ-ಪೆಸಿಫಿಕ್ ಭದ್ರತಾ ದೃಷ್ಟಿಕೋನವು ರಕ್ಷಣಾ ಸಹಕಾರವನ್ನು ಆರ್ಥಿಕ ಅಭಿವೃದ್ಧಿ, ತಂತ್ರಜ್ಞಾನ ಹಂಚಿಕೆ ಮತ್ತು ಮಾನವ ಸಂಪನ್ಮೂಲ ಪ್ರಗತಿಯೊಂದಿಗೆ ಸಂಪರ್ಕಿಸುತ್ತದೆ ಎಂದು ಅವರು ಹೇಳಿದರು. ಭದ್ರತೆ, ಬೆಳವಣಿಗೆ ಮತ್ತು ಸುಸ್ಥಿರತೆಯ ನಡುವಿನ ಬಲವಾದ ಸಂಪರ್ಕವು ಭಾರತ ಮತ್ತು ಆಸಿಯಾನ್ ನಡುವಿನ ಪಾಲುದಾರಿಕೆಯ ನಿಜವಾದ ಮನೋಭಾವವನ್ನು ಪ್ರತಿಬಿಂಬಿಸುತ್ತದೆ ಎಂದು ಸಚಿವ ರಾಜನಾಥ್ ಸಿಂಗ್ ಪ್ರತಿಪಾದಿಸಿದರು.

**ಧ್ವನಿ : ರಾಜನಾಥ್ ಸಿಂಗ್ (೨೩ ಸೆಕೆಂಡ್‌ಗಳು)**

ಆಸಿಯಾನ್ ರಕ್ಷಣಾ ಸಚಿವರ ಸಭೆಯ ನೇಪಥ್ಯದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ದಕ್ಷಿಣ ಕೊರಿಯಾ ರಕ್ಷಣಾ ಸಚಿವ ಆಹ್ನ್ ಗ್ಯೂ ಬ್ಯಾಕ್ ಅವರನ್ನು ಭೇಟಿಯಾದರು. ನಂತರ ಅವರು, ನ್ಯೂಜಿಲ್ಯಾಂಡ್ ರಕ್ಷಣಾ ಸಚಿವ ಜುಡಿತ್ ಕಾಲಿನ್ಸ್ ಅವರನ್ನು ಭೇಟಿಯಾಗಿ, ಭಾರತಕ್ಕೆ ಭೇಟಿ ನೀಡುವಂತೆ ಆಹ್ವಾನಿಸಿದರು. ಇದೇ ವೇಳೆ ವಿಯೆಟ್ನಾಂ ರಕ್ಷಣಾ ಸಚಿವ ಫಾನ್ ವ್ಯಾನ್ ಗಿಯಾಂಗ್ ಅವರನ್ನೂ ಸಹ ಭೇಟಿಯಾಗಿ ಮಾತುಕತೆ ನಡೆಸಿದರು.

<><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ, ನಾಳೆ ದೇಶದ ಅತ್ಯಂತ ಭಾರವಾದ ಸಂವಹನ ಉಪಗ್ರಹ ಸಿಎಂಎಸ್-೦೩ ಅನ್ನು ಉಡಾವಣೆ ಮಾಡಲು ಸಜ್ಜಾಗಿದೆ.  ಸುಮಾರು ೪ ಸಾವಿರದ ೪೦೦ ಕೆ.ಜಿ. ತೂಕದ ಸಿಎಂಎಸ್ -೦೩ ಬಹು-ಬ್ಯಾಂಡ್ ಮಿಲಿಟರಿ ಸಂವಹನ ಉಪಗ್ರಹವಾಗಿದ್ದು, ಇದನ್ನು ಜಿ.ಎಸ್.ಎ.ಟಿ-೭ಆರ್ ಎಂದೂ ಕರೆಯುತ್ತಾರೆ. ದೇಶದ ಅತ್ಯಂತ ಶಕ್ತಿಶಾಲಿ ರಾಕೆಟ್ ಆಗಿರುವ ಉಡಾವಣಾ ವಾಹನ ಮಾರ್ಕ್-೩ ರಲ್ಲಿ ಈ ಉಪಗ್ರಹವನ್ನು ಉಡಾವಣೆ ಮಾಡಲಾಗುವುದು. ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನಾಳೆ ಉಡಾವಣೆ ಆಗಲಿದೆ.

<><><>

ಕರ್ನಾಟಕ, ಆಂಧ್ರಪ್ರದೇಶ, ಛತ್ತೀಸ್‌ಗಢ, ಹರಿಯಾಣ, ಕೇರಳ, ಲಕ್ಷದ್ವೀಪ, ಮಧ್ಯಪ್ರದೇಶ, ಪಂಜಾಬ್ ಮತ್ತು ಪುದುಚೇರಿ ರಾಜ್ಯಗಳ ಜನತೆಗೆ ಇಂದು ರಾಜ್ಯ ರಚನೆ ದಿನದಂದು ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಶುಭಾಶಯ ಕೋರಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಈ ಪ್ರತಿಯೊಂದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ದೇಶದ ಪ್ರಗತಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿವೆ. ಈ ಪ್ರದೇಶಗಳು ತಮ್ಮ ಅಭಿವೃದ್ಧಿಯ ಪಯಣದಲ್ಲಿ ಹೊಸ ಮೈಲುಗಲ್ಲುಗಳನ್ನು ಸಾಧಿಸುವುದನ್ನು ಮುಂದುವರಿಸಲಿ. ಈ ರಾಜ್ಯಗಳು ಮತ್ತ ಕೇಂದ್ರಾಡಳಿತ ಪ್ರದೇಶಗಳ ಜನತೆ ನಿರಂತರ ಸಮೃದ್ಧಿ ಮತ್ತು ಯೋಗಕ್ಷೇಮ ಹೊಂದಲಿ ಎಂದು ಅವರು ಹಾರೈಸಿದರು. ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ಕನ್ನಡ ರಾಜ್ಯೋತ್ಸವವು ಕರ್ನಾಟಕದ ಅತ್ಯುತ್ತಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಇದು ಸಾಹಿತ್ಯ, ಕಲೆ ಮತ್ತು ಸಂಗೀತದಲ್ಲಿ ಪ್ರತಿಫಲಿಸುತ್ತದೆ. ಜೊತೆಗೆ ಕರ್ನಾಟಕದ ಜನರ ಶ್ರೇಷ್ಠತೆ ಮತ್ತು ಶ್ರಮಶೀಲ ಸ್ವಭಾವವನ್ನೂ ಸಹ ಆಚರಿಸುತ್ತದೆ. ಕರ್ನಾಟಕ ರಾಜ್ಯವು ಬುದ್ಧಿವಂತಿಕೆಯಲ್ಲಿ ಬೇರೂರಿರುವ ಪ್ರಗತಿಯ ಚೈತನ್ಯವನ್ನು ಸಾಕಾರಗೊಳಿಸುತ್ತದೆ ಎಂದು ಹೇಳಿದ್ದಾರೆ.

<><><>

ಲಖನೌ ನಗರವು ತನ್ನ ಶ್ರೀಮಂತ ಮತ್ತು ವೈವಿಧ್ಯಮಯ ಪಾಕಶಾಲೆಯ ಪರಂಪರೆಗಾಗಿ ಯುನೆಸ್ಕೋ ಸೃಜನಶೀಲ ನಗರಗಳ ಪಟ್ಟಿಗೆ ಸೇರ್ಪಡೆಯಾಗಿದೆ. ಉಜ್ಬೇಕಿಸ್ತಾನ್‌ನ ಸಮರ್ಕಂಡ್‌ನಲ್ಲಿ ನಡೆದ ೪೩ನೇ ಸಾಮಾನ್ಯ ಸಮ್ಮೇಳನದಲ್ಲಿ ಈ ನಗರವನ್ನು ಗ್ಯಾಸ್ಟ್ರೋನಮಿ ವಿಭಾಗದಲ್ಲಿ ಗುರುತಿಸಲಾಗಿದೆ. ಈ ಶ್ರೇಣಿಯು ಲಖನೌವನ್ನು ವಿಶ್ವದಾದ್ಯಂತ ೭೦ ಗ್ಯಾಸ್ಟ್ರೋನಮಿ ನಗರಗಳಲ್ಲಿ ಒಂದನ್ನಾಗಿಸುತ್ತದೆ ಮತ್ತು ಹೈದರಾಬಾದ್ ನಂತರ ಈ ಪ್ರಶಸ್ತಿಯನ್ನು ಗೆದ್ದ ಎರಡನೇ ಭಾರತದ ನಗರವಾಗಿದೆ. ಯುನೆಸ್ಕೋ ಮಹಾನಿರ್ದೇಶಕ ಆಡ್ರೆ ಅಜೌಲೆ ಅವರು ೫೮ ನಗರಗಳನ್ನು ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸೃಜನಾತ್ಮಕ ನಗರಗಳ ಪಟ್ಟಿಗೆ ಆಯ್ಕೆಮಾಡಿದ್ದಾರೆ. ಉತ್ತರ ಪ್ರದೇಶ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಜೈವೀರ್ ಸಿಂಗ್ ಈ ಕ್ರಮವನ್ನು ಸ್ವಾಗತಿಸಿದ್ದಾರೆ. ಪಾಕಶಾಲೆಯ ಪ್ರವಾಸೋದ್ಯಮವು ರಾಜ್ಯಕ್ಕೆ

ಬಹಳ ಹಿಂದಿನಿಂದಲೂ ಪ್ರವಾಸಿಗರನ್ನು ಆಕರ್ಷಿಸುತ್ತಿದೆ ಮತ್ತು ಈಗ ದೊರೆತಿರುವ ಗೌರವವು ಈ ವಲಯದಲ್ಲಿ ರಾಜ್ಯ ಮತ್ತ? ಉನ್ನತೀಕರಿಸಲು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.

<><><>

ಕೃತಕ ಬುದ್ಧಿಮತ್ತೆ, ಬ್ಲಾಕ್ ಚೈನ್, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ಸುಧಾರಿತ ಎನ್‌ಕ್ರಿಪ್ಶನ್ ಮೂಲಕ ಭವಿಷ್ಯದ ಡಿಜಿಟಲ್ ಗುರುತನ್ನು ಬಲಪಡಿಸಲು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ - ಯುಐಡಿಎಐ, ಆಧಾರ್ ಮಿಷನ್ - ೨೦೩೨ ಅನಾವರಣಗೊಳಿಸಿದೆ. ಈ ಉಪಕ್ರಮವು ಭಾರತದ ಡಿಜಿಟಲ್ ಗುರುತಿನ ಪರಿಸರ ವ್ಯವಸ್ಥೆಯನ್ನು ಮರು ವ್ಯಾಖ್ಯಾನಿಸಲು ಮತ್ತು ಮುಂದಿನ ದಶಕದಲ್ಲಿ ಮುಂದಿನ ಪೀಳಿಗೆಯ ಡಿಜಿಟಲ್ ಆಡಳಿತವನ್ನು ವೇಗಗೊಳಿಸಲು ಸಮಗ್ರ ಮಾರ್ಗಸೂಚಿಯನ್ನು ಒದಗಿಸುತ್ತದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ.

<><><>

ಜರ್ಮನಿಯ ಸಾರ್ಬ್ರೂಕೆನ್‌ನಲ್ಲಿ ನಡೆದ ಹೈಲೋ ಓಪನ್ ಸೂಪರ್ ೫೦೦ ಬ್ಯಾಡ್ಮಿಂಟನ್ ಪಂದ್ಯಾವಳಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್‌ಗೆ ಭಾರತದ ಉನ್ನತಿ ಹೂಡಾ ಲಗ್ಗೆ ಇಟ್ಟಿದ್ದಾರೆ. ಕ್ವಾರ್ಟರ್ ಫೈನಲ್‌ನಲ್ಲಿ ಅವರು, ಚೈನೀಸ್ ತೈಪೆಯ ಲಿನ್ ಹ್ಸಿಯಾಂಗ್-ಟಿ ಅವರನ್ನು ೨೨-೨೦, ೨೧-೧೩ ಸೆಟ್‌ಗಳಿಂದ ಸೋಲಿಸಿದರು. ಫೈನಲ್‌ನಲ್ಲಿ ಸ್ಥಾನ ಪಡೆಯಲು ಅವರು ಈಗ ಅಗ್ರ ಶ್ರೇಯಾಂಕಿತೆ ಇಂಡೋನೇಷ್ಯಾದ ಕುಸುಮಾ ವರ್ದಾನಿ ಅವರನ್ನು ಎದುರಿಸಲಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಲಕ್ಷ್ಯ ಸೇನ್, ಆಯುಷ್ ಶೆಟ್ಟಿ ಮತ್ತು ಕಿರಣ್ ಜಾರ್ಜ್ ಕ್ರಮವಾಗಿ ತಮ್ಮ ಕ್ವಾರ್ಟರ್-ಫೈನಲ್ ಪಂದ್ಯಗಳಲ್ಲಿ ಸೋಲುವುದರೊಂದಿಗೆ ಭಾರತದ ಅಭಿಯಾನ ಕೊನೆಗೊಂಡಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>